Government of Tamilnadu

ಎರಡನೆಯ ತರಗತಿ

STANDARD TWO

KANNADA MEDIUM

ಅವಧಿ II   TERM II

ಭಾಗ 2   Volume 2

ಗಣಿತ
MATHEMATICS

ಪರಿಸರ ಅಧ್ಯಯನ
ENVIRONMENTAL STUDIES

Untouchability is Inhuman and a Crime

Department of School Education

© Government of Tamilnadu

First Edition - 2012
Revised Edition - 2013
Reprint - 2014

(Published under Uniform System of School Education Scheme in Trimester Pattern }

Textbook Prepared and Compiled By

State Council of Educational Research and Training

College Road, Chennai - 600 006.

Textbook Printing

Tamil Nadu Textbook and Educational Services Corporation

College Road, Chennai - 600 006.

This book has been printed on 80 G.S.M. Maplitho Paper

Price : Rs.

Printed by Web Offset at :

Textbook available at

www.textbooksonline.tn.nic.in

ಪರಿವಿಡಿ

ಗಣಿತ

MATHEMATICS

1 - 37

ಕ್ರ.ಸಂಖ್ಯೆ	ಪರಿವಿಡಿ	ಪು.ಸಂಖ್ಯೆ
1.	ಸಂಖ್ಯೆಗಳ ಹೋಲಿಕೆ	1
2.	ಆಕಾರಗಳು	9
3.	ವ್ಯವಕಲನ (ಕಳೆಯುವುದು)	22
4.	ತೂಕದ ಅಳತೆ	33

ಪರಿಸರ ಅಧ್ಯಯನ
ENVIRONMENTAL STUDIES

38 - 74

ಕ್ರ.ಸಂಖ್ಯೆ	ಪರಿವಿಡಿ	ಪು.ಸಂಖ್ಯೆ
1.	ಊರಿನ ಸಂತೆ	39
2.	ಕೆಲಸ	51
3.	ಶುಚಿತ್ವವೇ ಸುಖ	57
4.	ತೆಪ್ಪದ ಪಯಣ	66

ಗಣಿತ
MATHEMATICS

KANNADA MEDIUM

ಎರಡನೆಯ ತರಗತಿ
STANDARD TWO

ಅವಧಿ II
TERM II

1. ಸಂಖ್ಯೆಗಳ ಹೋಲಿಕೆ

ಒಂದೇ ಸಂಖ್ಯೆಗಳು ಪುನಃ ಬರದಂತೆ 2– ಅಂಕೆಯ ಸಂಖ್ಯೆಗಳನ್ನು ರಚಿಸಿರಿ.

ಅಂಕೆಗಳ ಸಹಾಯದಿಂದ 2– ಅಂಕೆಯ ಸಂಖ್ಯೆಗಳನ್ನು ರಚಿಸುವುದನ್ನು ನಾವು ಕಲಿಯೋಣ.

ಉದಾಹರಣೆ

2 ಮತ್ತು 6 ಎಂಬ ಎರಡು ಸಂಖ್ಯೆಗಳನ್ನು ತೆಗೆದುಕೊಳ್ಳಿ

ಕೊಟ್ಟಿರುವ ಸಂಖ್ಯೆಗಳನ್ನು ಉಪಯೋಗಿಸಿ ನಾವು 26 ಮತ್ತು 62 ಎಂಬ ಎರಡು ಅಂಕೆಗಳ ಸಂಖ್ಯೆಗಳನ್ನು ರಚಿಸಬಹುದು.

ಅತಿ ದೊಡ್ಡ ಸಂಖ್ಯೆ 62.

ಅತಿ ಚಿಕ್ಕ ಸಂಖ್ಯೆ 26.

ಕೊಟ್ಟಿರುವ ಚೌಕವನ್ನು ಭರ್ತಿಮಾಡಿ

ಸಂಖ್ಯೆಗಳು	ಅತಿ ದೊಡ್ಡ ಸಂಖ್ಯೆ	ಅತಿ ಚಿಕ್ಕ ಸಂಖ್ಯೆ
4, 7		
6, 9		
8, 5		
9, 3		

ಆಲೋಚಿಸಿ !

ಕೊಟ್ಟಿರುವ ಎರಡು ಅಂಕೆಗಳಲ್ಲಿ ಸೊನ್ನೆಯು ಒಂದು ಅಂಕೆಯಾದರೆ ಅವುಗಳಿಂದ ಎಷ್ಟು 2–ಅಂಕೆಗಳ ಸಂಖ್ಯೆಗಳನ್ನು ರಚಿಸ ಬಹುದು.

- ★ 4 ಮತ್ತು 5
- ★ 7 ಮತ್ತು 9
- ★ 4 ಮತ್ತು 9
- ★ 2 ಮತ್ತು 3
- ★ 1 ಮತ್ತು 8
- ★ 5 ಮತ್ತು 3

ಉದಾಹರಣೆ

ಕೊಟ್ಟಿರುವ 3, 4 ಮತ್ತು 6, ಎಂಬ ಮೂರು ಸಂಖ್ಯೆಗಳನ್ನು ಉಪಯೋಗಿಸಿದಾಗ,

ನಮಗೆ 34, 43, 46, 64, 63 ಮತ್ತು 36 ಸಿಗುತ್ತದೆ.

ಅವುಗಳಲ್ಲಿ ಅತಿ ದೊಡ್ಡ ಸಂಖ್ಯೆ 64.

ಅತಿ ಚಿಕ್ಕ ಸಂಖ್ಯೆ 34.

ಅಂಕೆಗಳಲ್ಲಿ ಯಾವುದಾದರೂ ಒಂದು ಅಂಕೆ 0 ಆಗಿದ್ದರೆ, ನಮಗೆ 2–ಅಂಕೆಗಳಿರುವ ಕೇವಲ 4 ಸಂಖ್ಯೆಗಳು ದೊರೆಯುವುದು.ಉದಾಹರಣೆಗೆ 3, 0 ಮತ್ತು 6 ಸಂಖ್ಯೆಗಳನ್ನು ಉಪಯೋಗಿಸಿ

ನಮಗೆ 30, 36, 63, 60 ಸಿಗುತ್ತದೆ.

ಅವುಗಳಲ್ಲಿ ಅತಿ ದೊಡ್ಡ ಸಂಖ್ಯೆ 63.

ಅತಿ ಚಿಕ್ಕ ಸಂಖ್ಯೆ 30.

2 –ಅಂಕೆಯ ಯಾವುದಾದರೂ 6 ಸಂಖ್ಯೆಗಳನ್ನು ರಚಿಸಿ. ಅವುಗಳಲ್ಲಿ ಅತಿ ಚಿಕ್ಕ ಸಂಖ್ಯೆಗೆ ವೃತ್ತ ಹಾಕಿ ಮತ್ತು ಅತಿ ದೊಡ್ಡ ಸಂಖ್ಯೆಗೆ ಗೆರೆ ಹಾಕಿ. ಮೊದಲಿನದನ್ನು ನಿಮಗಾಗಿ ಮಾಡಿ ತೋರಿಸಲಾಗಿದೆ.

1,3,5	13	31	35	53	51	15
3,6,7						
4,2,0						
5,8,2						
6,5,1						
7,9,3						

ಕೊಟ್ಟಿರುವ ಮೂರು ಅಂಕೆಗಳಲ್ಲಿ ಎರಡು ಅಂಕೆಗಳು ಸೊನ್ನೆ ಆದರೆ 2–ಅಂಕೆಯ ಎಷ್ಟು ಸಂಖ್ಯೆಗಳನ್ನು ರಚಿಸಬಹುದು?

ಚಟುವಟಿಕೆ

ಶಿಕ್ಷಕರು ಮಕ್ಕಳ ಸಹಾಯದಿಂದ ಸಂಖ್ಯಾ ಕಾರ್ಡುಗಳನ್ನು ತಯಾರಿಸಬಹುದು.

1	2	5
3	4	



ದಿನದರ್ಶಿಕೆ (ಕ್ಯಾಲೆಂಡರ್) ಯಲ್ಲಿ ಮುಗಿದ (ಕಳೆದ) ತಿಂಗಳುಗಳ ಪುಟಗಳನ್ನು ಸಂಗ್ರಹಿಸಿ.

1 ರಿಂದ 9 ರ ವರೆಗಿನ ಸಂಖ್ಯೆಗಳನ್ನು ಕತ್ತರಿಸಿ.

ಕತ್ತರಿಸಿದ ಸಂಖ್ಯೆಗಳನ್ನು ಪ್ರತ್ಯೇಕವಾದ ರಟ್ಟುಗಳನ್ನು ಅಂಟಿಸಿರಿ.

ಇಂತಹ ಸಂಖ್ಯಾ ರಟ್ಟುಗಳನ್ನು ನಿಮ್ಮಿಂದ ಸಾಧ್ಯವಾದಷ್ಟು ತಯಾರಿಸಿ.

4 ಅಥವಾ 5 ಮಕ್ಕಳಿರುವ ಗುಂಪುಗಳನ್ನಾಗಿ ತರಗತಿಯ ಮಕ್ಕಳನ್ನು ವಿಂಗಡಿಸಿ.

ಪ್ರತಿಯೊಂದು ಗುಂಪಿನವರಿಗೂ ಸಂಖ್ಯಾ ರಟ್ಟುಗಳಿರುವ ಕಟ್ಟುಗಳನ್ನು ಒದಗಿಸಿ.

ಆ ಸಂಖ್ಯಾರಟ್ಟುಗಳನ್ನು ಉಪಯೋಗಿಸಿ 2 ಅಂಕೆಗಳಿರುವ ಸಂಖ್ಯೆಗಳನ್ನು ಸಾಧ್ಯವಾದಷ್ಟು ರಚಿಸುವಂತೆ ಮಕ್ಕಳಿಗೆ ತಿಳಿಸಿ.

ಅತಿ ದೊಡ್ಡ ಹಾಗೂ ಅತಿ ಚಿಕ್ಕ ಸಂಖ್ಯೆಗಳನ್ನು ಕಂಡುಹಿಡಿಯುವಂತೆ ಮಕ್ಕಳಿಗೆ ತಿಳಿಸಿರಿ.

ಇದೇ ರೀತಿ ಬೇರೆ ಬೇರೆ ಸಂಖ್ಯಾರಟ್ಟುಗಳನ್ನು ಉಪಯೋಗಿಸಿ ಈ ಚಟುವಟಿಕೆಯನ್ನು ಮುಂದುವರಿಸುವಂತೆ ಮಕ್ಕಳಿಗೆ ತಿಳಿಸಿ.

ಯಾವ ಗುಂಪಿನ ಮಕ್ಕಳು ಅಧಿಕ ಸಂಖ್ಯೆಗಳನ್ನು ರಚಿಸಿರುವರು ಎಂಬುದನ್ನು ಕಂಡುಹಿಡಿಯಿರಿ.

ಸೂಚನೆ: 0 ಈ ರಟ್ಟನ್ನು ಉಳಿದ ಸಂಖ್ಯೆಗಳ ರಟ್ಟುಗಳೊಂದಿಗೆ ಸೇರಿಸಿ ಅತಿ ದೊಡ್ಡ ಹಾಗೂ ಅತಿ ಸಣ್ಣ ಸಂಖ್ಯೆಗಳನ್ನು ಕಂಡುಹಿಡಿಯುವಂತೆ ಮಕ್ಕಳಿಗೆ ತಿಳಿಸಿ.

ಗಣಿತ

ಪುನಃ ಬರುವಂತೆ 2-ಅಂಕೆಯ ಸಂಖ್ಯೆಗಳ ರಚನೆ

3 ಮತ್ತು 7 ಎರಡು ಸಂಖ್ಯೆಗಳನ್ನು ತೆಗೆದುಕೊಳ್ಳೋಣ. ಕೊಟ್ಟಿರುವ ಅಂಕೆಗಳು ಬಿಡಿಗಳ ಮತ್ತು ಹತ್ತರ ಸ್ಥಾನದಲ್ಲಿ ಪುನಃ ಬಂದಾಗ ನಮಗೆ 33 ಮತ್ತು 77 ಎಂಬ ಸಂಖ್ಯೆಗಳು ಸಿಗುತ್ತವೆ.

ಅತಿ ದೊಡ್ಡ ಸಂಖ್ಯೆ 77.

ಅತಿ ಚಿಕ್ಕ ಸಂಖ್ಯೆ 33.

5 ಮತ್ತು 9 ನ್ನು ಉಪಯೋಗಿಸಿ ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ.

ಅತಿ ದೊಡ್ಡ ಸಂಖ್ಯೆ 99

ಅತಿ ಚಿಕ್ಕ ಸಂಖ್ಯೆ 55

★ 8 ಮತ್ತು 6 ಎಂಬ ಸಂಖ್ಯೆಗಳನ್ನು ಉಪಯೋಗಿಸಿ ಅತಿ ದೊಡ್ಡ ಮತ್ತು ಅತಿ ಚಿಕ್ಕ ಸಂಖ್ಯೆಗಳನ್ನು ರಚಿಸಿರಿ.

4, 5, 8.' ಎಂಬ ಯಾವುದಾದರೂ ಮೂರು ಸಂಖ್ಯೆಗಳನ್ನು ತೆಗೆದುಕೊಳ್ಳೋಣ.

ಅತಿ ದೊಡ್ಡ ಸಂಖ್ಯೆ 88.

ಅತಿ ಚಿಕ್ಕ ಸಂಖ್ಯೆ 44.

ಸಂಖ್ಯೆಗಳು	ಅತಿ ದೊಡ್ಡ ಸಂಖ್ಯೆ	ಅತಿ ಚಿಕ್ಕ ಸಂಖ್ಯೆ
3, 9		
4, 8		
2, 7, 5		
6, 3, 8		
1, 7, 9		

ಆಲೋಚಿಸಿ!

ಕೊಟ್ಟಿರುವ ಸಂಖ್ಯೆಗಳಲ್ಲಿ ಯಾವುದಾದರೂ ಒಂದು ಸಂಖ್ಯೆಯು ಸೊನ್ನೆ ಆದರೆ, ಅವುಗಳಲ್ಲಿ ಅತಿ ದೊಡ್ಡ ಮತ್ತು ಚಿಕ್ಕ ಸಂಖ್ಯೆಯ ಬಗ್ಗೆ ಆಲೋಚಿಸಿ.

ಕ್ರಮಸಂಖ್ಯೆ ಮತ್ತು ಪ್ರಧಾನ ಸಂಖ್ಯೆಗಳು.

ಪ್ರಾಣಿಗಳ ಕಡೆ ನೋಡಿ.



ಕರಡಿಯು ಮೊಲದ ಸ್ಥಾನದಲ್ಲಿ ನಿಂತಿದೆ.

ಸಿಂಹವು ಎರಡನೆಯ ಸ್ಥಾನದಲ್ಲಿ ನಿಂತಿದೆ.

ಜೀಬ್ರಾವು ಸಾಲಿನಲ್ಲಿ ಆರನೆಯ ಪ್ರಾಣಿಯಾಗಿದೆ. ಅದರ ಸ್ಥಾನವು ಆರನೆಯದು.

ಬೆಕ್ಕು ಸಾಲಿನಲ್ಲಿ ಹತ್ತನೆಯ ಪ್ರಾಣಿ. ಅದರ ಸ್ಥಾನ ಹತ್ತನೆಯದು.

ಇಲ್ಲಿ ಮೊದಲನೆಯದು, ಎರಡನೆಯದು, ಮೂರನೆಯದು ....ಕ್ರಮಸಂಖ್ಯೆ.

ಕ್ರಮ ಸಂಖ್ಯೆಯು ಗುಂಪಿನಲ್ಲಿ ಒಂದು ವಸ್ತುವಿನ ಅಥವಾ ಒಬ್ಬ ವ್ಯಕ್ತಿಯ ಸ್ಥಾನವನ್ನು ತಿಳಿಸುತ್ತದೆ.

ಪ್ರಧಾನ ಸಂಖ್ಯೆಯು ಗುಂಪಿನಲ್ಲಿ ವಸ್ತುಗಳ ಅಥವಾ ವ್ಯಕ್ತಿಗಳ ಸಂಖ್ಯೆಯನ್ನು ಹೇಳುತ್ತದೆ.

ಓದಿ ಕಲಿಯಿರಿ.

ಪ್ರಧಾನ ಸಂಖ್ಯೆ		ಕ್ರಮ ಸಂಖ್ಯೆ (ಕ್ರಮವಾಚಕ)	
1	ಒಂದು	1ನೇ	ಮೊದಲನೆಯ
2	ಎರಡು	2ನೇ	ಎರಡನೆಯ
3	ಮೂರು	3ನೇ	ಮೂರನೆಯ
4	ನಾಲ್ಕು	4ನೇ	ನಾಲ್ಕನೆಯ
5	ಐದು	5ನೇ	ಐದನೆಯ
6	ಆರು	6ನೇ	ಆರನೆಯ
7	ಏಳು	7ನೇ	ಏಳನೆಯ
8	ಎಂಟು	8ನೇ	ಎಂಟನೆಯ
9	ಒಂಬತ್ತು	9ನೇ	ಒಂಬತ್ತನೆಯ
10	ಹತ್ತು	10ನೇ	ಹತ್ತನೆಯ

ವಾರಗಳ ಮತ್ತು ತಿಂಗಳುಗಳ ಕ್ರಮಸಂಖ್ಯೆ ಮತ್ತು ಪ್ರಧಾನ ಸಂಖ್ಯೆಗಳು.

ಆದಿತ್ಯವಾರವು ವಾರದ ಮೊದಲನೆಯ ದಿನ.

ಬುಧವಾರವು ವಾರದ ________________ ದಿನ

ಶುಕ್ರವಾರವು ವಾರದ ________________ ದಿನ.

ಶನಿವಾರವು ವಾರದ ________________ ದಿನ.

ಜನರವರಿಯು ವರ್ಷದ ________________ ತಿಂಗಳು.

ಆಗಸ್ಟು ವರ್ಷದ ________________ ತಿಂಗಳು.

ಒಂದು ವಾರದಲ್ಲಿರುವ ದಿನಗಳ ಸಂಖ್ಯೆ ________________ ಆಗಿದೆ.

ಒಂದು ವರ್ಷದಲ್ಲಿರುವ ತಿಂಗಳುಗಳ ಸಂಖ್ಯೆ ________________ ಆಗಿದೆ.

ಚಟುವಟಿಕೆ

ಬಣ್ಣ ಹಚ್ಚಿ ಆನಂದಿಸಿ !

ಎಡದಿಂದ ಮೂರನೇ ಹೂವಿಗೆ ನೀಲಿ ಬಣ್ಣ ಹಚ್ಚಿ.

ಎಡದಿಂದ ಏಳನೇ ಹೂವಿಗೆ ಕೆಂಪು ಬಣ್ಣ ಹಚ್ಚಿ

ಎಡದಿಂದ ಎಂಟನೇ ಹೂವಿಗೆ ಹಸಿರು ಬಣ್ಣ ಹಚ್ಚಿ.



ಚಟುವಟಿಕೆ

ನಾನು ಯಾರು?

ನನ್ನ 3ನೇ ಅಕ್ಷರವು **‘D’** ಆಗಿದೆ.

ನನ್ನ 1ನೇ ಮತ್ತು 4ನೇ ಅಕ್ಷರವು **‘I’** ಆಗಿದೆ.

ನನ್ನ 5ನೇ ಅಕ್ಷರವು **‘A’** ಆಗಿದೆ.

ನನ್ನ 2ನೇ ಮತ್ತು 6ನೇ ಅಕ್ಷರವು **‘N’** ಆಗಿದೆ.

ಶಿಕ್ಷಕರಿಗೆ ಸೂಚನೆ

ಮೇಲೆ ತಿಳಿಸಿದಂತೆ ಹಲವು ಪದಗಳನ್ನು ವಿದ್ಯಾರ್ಥಿಗಳು ರಚಿಸುವಂತೆ ಪ್ರೋತ್ಸಾಹಿಸಿ.

ಚಟುವಟಿಕೆ

ಶಿಕ್ಷಕಿಯು ಮಕ್ಕಳನ್ನು ತರಗತಿಯಿಂದ ಪೆನ್ಸಿಲು, ರಬ್ಬರು, ನಾಣ್ಯ, ಬಣ್ಣದ ಪೆನ್ಸಿಲುಗಳು ಮುಂತಾದ ವಸ್ತುಗಳನ್ನು ಸಂಗ್ರಹಿಸಿ ಮೇಜಿನ ಮೇಲೆ ಇಡಲು ತಿಳಿಸುತ್ತಾರೆ. ಮಕ್ಕಳನ್ನು ಗುಂಪುಗಳನ್ನಾಗಿ ಶಿಕ್ಷಕಿಯು ವಿಂಗಡಿಸುವರು ಪ್ರತಿ ಗುಂಪು ಮೇಜಿನಿಂದ ಒಂದು ವಸ್ತುವನ್ನು ಆರಿಸಿಕೊಂಡು ಬಂದು ಸಾಲಿನಲ್ಲಿ ನಿಲ್ಲಬೇಕು.

ಉಳಿದವರಿಗೆ ಶಿಕ್ಷಕಿಯು ಈ ಕೆಳಕಂಡ ಪ್ರಶ್ನೆಗಳನ್ನು ಕೇಳುತ್ತಾರೆ.

- ✶ ಮೊದಲಲ್ಲಿ ನಿಂತ ಮಗುವಿನ ಕೈಯಲ್ಲಿರುವ ವಸ್ತು ಯಾವುದು?
- ✶ 5ನೇ ಮಗುವಿನ ಕೈಯಲ್ಲಿ ಏನಿದೆ?
- ✶ ಯಾರ ಕೈಯಲ್ಲಿ ಪೆನ್ಸಿಲು ಇದೆ?
- ✶ ಎಷ್ಟು ಮಂದಿ ಮಕ್ಕಳು ರಬ್ಬರನ್ನು ಆರಿಸಿರುವರು?

ಇಂತಹ ಹಲವು ಪ್ರಶ್ನೆಗಳನ್ನು ಶಿಕ್ಷಿಕಿಯು ಮಕ್ಕಳಿಗೆ ಕೇಳಬಹುದು.
ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಡಿಸಿ ಈ ಚಟುವಟಿಕೆಯನ್ನು ಮುಂದುವರಿಸಬಹುದು.

ಶಿಕ್ಷಕರಿಗೆ ಸೂಚನೆ

ನಮ್ಮ ದಿನನಿತ್ಯದ ಜೀವನದಲ್ಲಿ ಕ್ರಮ ಸಂಖ್ಯೆಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಉಪಯೋಗಿಸುತ್ತೇವೆ. ಎಂಬುದನ್ನು ಒತ್ತಿ ಹೇಳಿ.

ಉದಾಹರಣೆಗೆ : ರಾಮುವು ತನ್ನ 6ನೇ ಹುಟ್ಟು ಹಬ್ಬವನ್ನು ಕಳೆದ ಭಾನುವಾರ ಆಚರಿಸಿದನು, ಎಡದಿಂದ ಎರಡನೇ ಮಗು, ವಾರದ ಮೊದಲನೇ ದಿನ ಮೊದಲಾದವುಗಳು.

2. ಆಕಾರಗಳು

ತರಗತಿಯನ್ನು ಗಮನಿಸಿ.



ಅಧ್ಯಾಪಕರು ವಸ್ತುಗಳ ವಿವಿಧ ಆಕಾರಗಳನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಹೇಳುವರು

ನಾವು ಕೆಳಗಿನ ಚಿತ್ರಗಳ ಕಡೆಗೆ ನೋಡೋಣ.



ಗಣಿತ


ಗೆ
ಶ್ರೀ. ರಾಜ್
2ನೇ ಅಡ್ಡ ರಸ್ತೆ,
ಚೆನ್ನೈ – 600014.

ಪ್ರಜಾವಾಣಿ
ಬಹುಮತದತ್ತ ಬಿಜೆಪಿ




1 INCH 2 3 4 5 6
2 CM 3 4 5 6 7 8 9 10 11 12 13 14 15 16

ಇವುಗಳು ಆಯತಾಕಾರದಲ್ಲಿ ಇವೆ.

5.00
भारत INDIA
Mishmi Takin

ಆಮಂತ್ರಣ ಪತ್ರಿಕೆ



ಇವುಗಳು ಚೌಕಾಕಾರದಲ್ಲಿ ಇವೆ

ನಾವು ಈ ಕೆಳಗಿನ ಚಿತ್ರಗಳನ್ನು ನೋಡೋಣ.

ಕೆಳಗಿನ ವಸ್ತುಗಳನ್ನು ಅವುಗಳ ಆಕಾರಗಳೊಂದಿಗೆ ಹೊಂದಿಸಿ.

ಕೆಳಗಿನ ವಸ್ತುಗಳನ್ನು △, ▭, □, ○ ಗಳಲ್ಲಿ ಗುರುತಿಸಿ.

ಕನ್ನಡಿ	: ________________
ಗಡಿಯಾರ	: ________________
ಪುಸ್ತಕದಹಾಳೆ	: ________________
ಹತ್ತು ರೂಪಾಯಿಯ ನೋಟು	: ________________
ನಾಣ್ಯ	: ________________
ಕರವಸ್ತ್ರ	: ________________
ಸಿ. ಡಿ	: ________________
ಬಳೆ	: ________________

ಶಿಕ್ಷಕರಿಗೆ ಸೂಚನೆ

ತರಗತಿಯಲ್ಲಿ ಇರುವಂತಹ ಹಲವು ವಸ್ತುಗಳ ಮೂಲಕ ವಿಧ್ಯಾರ್ಥಿಗಳಿಗೆ ಇದರ ಬಗ್ಗೆ ಅಭ್ಯಾಸ ಮಾಡುವಂತೆ ಮಾಡಿ.

ಚಟುವಟಿಕೆ

ಹಿಡಿಕಡ್ಡಿ, ಬೆಂಕಿಕಡ್ಡಿ ಮತ್ತು ಸ್ಟ್ರಾ (Straw) ಗಳನ್ನು ಉಪಯೋಗಿಸಿ ತ್ರಿಕೋನ, ಆಯತ, ಚೌಕ–ಗಳನ್ನು ರಚಿಸುವಂತೆ ಮಾಡಿ.

ಯೋಚಿಸಿ : ಸಣ್ಣ ಕಡ್ಡಿಗಳಿಂದ ವೃತ್ತಾಕಾರವನ್ನು ರಚಿಸಲು ನಿಮ್ಮಿಂದ ಸಾಧ್ಯವೇ?

ಎರಡು ಅಳತೆಯ ಆಕಾರಗಳು.



ಯಾವುದೇ ಚಪ್ಪಟೆಯಾಗಿರುವ ತಳವನ್ನು ನಾವು ಸಮತಲ ಎನ್ನುತ್ತೇವೆ. ಸಮತಲಕ್ಕೆ ಎರಡು ಅಳತೆಗಳಿವೆ.

ಉದಾಹರಣೆಗಳು :

ಮೇಜಿನ ಮೇಲ್ಮೈ, ಒಂದು ಪಠ್ಯ ಪುಸ್ತಕದ ಮೇಲ್ಮೈ, ವೃತ್ತಪತ್ರಿಕೆಯ ಒಂದು ಹಾಳೆ, ನೆಲದ ಮೇಲ್ಮೈ.



ಒಂದು ಆಯಾತಾಕಾರಕ್ಕೆ

- ನಾಲ್ಕು ಭುಜಗಳು.
- ವಿರುದ್ಧ ಭುಜಗಳು ಒಂದಕ್ಕೊಂದು ಸಮ
- ನಾಲ್ಕು ಮೂಲೆಗಳು ಇವೆ.

ಒಂದು ಚೌಕಾಕಾರಕ್ಕೆ

- ನಾಲ್ಕು ಭುಜಗಳು.
- ವಿರುದ್ಧ ಭುಜಗಳು ಒಂದಕ್ಕೊಂದು ಸಮ
- ನಾಲ್ಕು ಮೂಲೆಗಳೂ ಇವೆ.



ತ್ರಿಕೋನ



ಚೌಕ

ವೃತ್ತ



ಒಂದು ತ್ರಿಕೋನಕ್ಕೆ

- ☞ ಮೂರು ಭುಜಗಳು ಅವು ಒಂದಕ್ಕೊಂದು ಸಮನಾಗಿರಬೇಕಾಗಿಲ್ಲ.
- ☞ ಮೂರು ಮೂಲೆಗಳು ಇವೆ.

ಒಂದು ವೃತ್ತಕ್ಕೆ

- ☞ ಭುಜಗಳು ಇಲ್ಲ.
- ☞ ಮೂಲೆಗಳು ಇಲ್ಲ.

ಬಿಟ್ಟ ಜಾಗವನ್ನು ತುಂಬಿರಿ :

ಒಂದು ಚೌಕದಲ್ಲಿ ______________________ ಸಮ ಭುಜಗಳು ಇವೆ.

ಒಂದು ಆಯಾತಾದಲ್ಲಿ ______________________ ಭುಜಗಳು ಇವೆ.

ಒಂದು ಆಯಾತಾಕಾರದಲ್ಲಿರುವ ______________________ ಭುಜಗಳು ಸಮವಾಗಿವೆ.

ಒಂದು ತ್ರಿಕೋನದಲ್ಲಿ ______________________ ಮೂಲೆಗಳು ಇವೆ.

ಒಂದು ವೃತ್ತದಲ್ಲಿ ______________________ ಭುಜಗಳು ಇವೆ.

ಒಂದು ಚೌಕದಲ್ಲಿ ______________________ ಮೂಲೆಗಳು ಇವೆ.

ಒಂದು ತ್ರಿಕೋನದಲ್ಲಿ ______________________ ಭುಜಗಳು ಇವೆ.

ಒಂದು ವೃತ್ತದಲ್ಲಿ ______________________ ಮೂಲೆಗಳು ಇವೆ/ ಇಲ್ಲ.

ಕೆಳಗಿನ ಆಕಾರಗಳಿಗೆ ಬಣ್ಣ ಹಚ್ಚಿ.



ರೇಖೆಗಳು.

ಒಂದು ಖಾಲಿ ಕಾಗದದ ಹಾಳೆಯನ್ನು ತೆಗೆದುಕೊಂಡು ಅದರ ಒಂದು ಭುಜವನ್ನು ಮತ್ತೊಂದು ಭುಜಕ್ಕೆ ಹೊಂದಿಕೆಯಾಗುವಂತೆ ಮಡಚಿ ಹಾಳೆಯನ್ನು ನಿಮ್ಮ ಕೈಗಳಿಂದ ಒತ್ತಿರಿ. ನಂತರ ಹಾಳೆಯನ್ನು ಬಿಡಿಸಿರಿ.

ಅಲ್ಲಿ ಉಂಟಾಗುವ ಮಡಿಕೆಯು ಸರಳ ರೇಖೆಯ ಕಲ್ಪನೆಯನ್ನು ನಿಮಗೆ ನೀಡುತ್ತದೆ.



ರೇಖೆಯ ಒಂದು ಭಾಗವು ನೇರವಾಗಿ ಅಥವಾ ವಕ್ರವಾಗಿಯೂ ಇರಬಹುದು.

ಸರಳ ರೇಖೆ



ವಕ್ರ ರೇಖೆ

ನಾವು ಸರಳ ರೇಖೆಗಳನ್ನು ಎಳೆಯೋಣವೇ?

ಈ ವಸ್ತುಗಳನ್ನು ಉಪಯೋಗಿಸಿ ನಿಮ್ಮ ನೋಟು ಪುಸ್ತಕದಲ್ಲಿ ರೇಖೆಗಳನ್ನು ಎಳೆಯಿರಿ.



ನೇರ ಮತ್ತು ವಕ್ರ ರೇಖೆಗಳನ್ನು ಉಪಯೋಗಿಸಿ ಕೆಳಗಿನವುಗಳನ್ನು ಪೂರ್ತಿಗೊಳಿಸಿ.



ನಿಮ್ಮಿಷ್ಟದಂತೆ ಚುಕ್ಕೆಗಳನ್ನು ಜೋಡಿಸಿ. ಚೌಕಗಳು, ಆಯತಗಳು, ತ್ರಿಕೋನಗಳು ಮತ್ತು ಸರಳ ರೇಖೆಗಳನ್ನು ಬರೆದು ಆನಂದಿಸಿ.



ನೇರ ಮತ್ತು ವಕ್ರ ರೇಖೆಗಳನ್ನು ಉಪಯೋಗಿಸಿ ಕೊಟ್ಟಿರುವ ಕೋಷ್ಟಕವನ್ನು ಪೂರ್ತಿಗೊಳಿಸಿ.

3	3	3	3	3	3
ಅ					
C					
6					
ಉ					
S					
ಯ					
8					
Z					

ಕೆಳಗೆ ಬೆರಕೆ ಮಾಡಿ ಕೊಟ್ಟಿರುವ ಚಿತ್ರಗಳಲ್ಲಿ ಎಷ್ಟು ವೃತ್ತಗಳು, ತ್ರಿಕೋನಗಳು, ಚೌಕಗಳು ಮತ್ತು ಆಯತಗಳು ಇವೆ ಎಂಬುದನ್ನು ಲೆಕ್ಕ ಮಾಡಿ. ಕೆಳಗೆ ಕೊಟ್ಟಿರುವ ಖಾಲಿ ಜಾಗಗಳಲ್ಲಿ ಉತ್ತರವನ್ನು ಬರೆಯಿರಿ.



ತ್ರಿಕೋನಗಳು ____________ ಚೌಕಗಳು ____________

ಆಯತಗಳು ____________ ವೃತ್ತಗಳು ____________

3. ವ್ಯವಕಲನ (ಕಳೆಯುವುದು)

ಜ್ಞಾಪಿಸಿಕೊಳ್ಳಿ !

ಕೆಳಗಿನವುಗಳನ್ನು ಕಳೆಯಿರಿ.



ಕೆಳಗಿನವುಗಳನ್ನು ಕಳೆಯಿರಿ.

5 – 3 =

3 – 2 =

7 – 2 =

10 – 2 =

6 – 4 =

10 – 3 =

8 – 4 =

9 – 3 =

2 – 1 =

6 – 3 =

15 – 3 =

12 – 8 =

10 – 6 =

11 – 9 =

7 – 0 =

19 – 4 =

14 – 10 =

15 – 2 =

20 – 10 =

13 – 7 =

2-ಅಂಕೆಯ ಸಂಖ್ಯೆಗಳ ವ್ಯವಕಲನ (ಪುನಃ ಗುಂಪು ಗೂಡಿಸದೆ) ವಿಂಗಡಿಸು.

48 ರಿಂದ 25 ನ್ನು ಕಳೆಯಿರಿ.

48 − 25 = ☐



	ಹ	ಬಿ
	4	8
−	2	5
		3

ಮೊದಲಿಗೆ ಬಿಡಿಗಳ ಸ್ಥಾನದಲ್ಲಿದ್ದ ಅಂಕೆಯನ್ನು ಕಳೆಯಬೇಕು.

	ಹ	ಬಿ
	4	8
−	2	5
	2	3

ನಂತರ ಹತ್ತರ ಸ್ಥಾನದಲ್ಲಿದ್ದ ಅಂಕೆಯನ್ನು ಕಳೆಯಬೇಕು.

48 − 25 = 23

65 ರಿಂದ 23 ನ್ನು ಕಳೆಯಿರಿ.

65 − 23 = ☐



	ಹ	ಬಿ
	6	5
−	2	3

65 − 23 = ☐

ಗಣಿತ

ಈ ಕೆಳಗಿನವುಗಳನ್ನು ಕಳೆಯಿರಿ.

	ಹ	ಬಿ
	8	4
—	3	1

	ಹ	ಬಿ
	9	6
—	4	2

	ಹ	ಬಿ
	6	8
—	2	6

	ಹ	ಬಿ
	9	5
—	5	4

	ಹ	ಬಿ
	8	6
—	2	4

	ಹ	ಬಿ
	4	5
—	2	3

	ಹ	ಬಿ
	5	7
—	3	4

	ಹ	ಬಿ
	6	8
—	2	6

	ಹ	ಬಿ
	8	9
—	5	2

	ಹ	ಬಿ
	7	8
—	5	5

	ಹ	ಬಿ
	9	8
—	7	2

	ಹ	ಬಿ
	5	6
—	4	1

ಕಳೆಯಿರಿ

17 ನ್ನು 39 ರಿಂದ

24 ನ್ನು 87 ರಿಂದ

45 ನ್ನು 76 ರಿಂದ

63 ನ್ನು 98 ರಿಂದ

50 ನ್ನು 65 ರಿಂದ

36 ನ್ನು 48 ರಿಂದ

ಯಾವುದೇ ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಕಳೆದಾಗ ಸೊನ್ನೆಯು ಉಳಿಯುವುದು (ಬರುವುದು).

ಉದಾಹರಣೆ

5 - 5 = 0

4 - 4 = 0

12 - 12 = 0

ಮರು ಗುಂಪಾಗಿಸುವ ಮೂಲಕ 2-ಅಂಕೆಯ ಸಂಖ್ಯೆಗಳ ವ್ಯವಕಲನ

ಈಗ ನಾವು 16 ನ್ನು 33 ರಿಂದ ಕಳೆಯೋಣ.



	ಹ	ಬಿ
	3	3
–	1	6

$3 < 6$ ಆಗಿರುವುದರಿಂದ 3 ಬಿಡಿಗಳಿಂದ 6 ಬಿಡಿಗಳನ್ನು ಕಳೆಯಲು ಅಸಾಧ್ಯ.

ಆದುದರಿಂದ ನಾವು 1 ಹತ್ತನ್ನು 10 ಬಿಡಿಗಳಾಗಿ ಬದಲಾಯಿಸಿಕೊಳ್ಳುತ್ತೇವೆ.



	2	13
	ಹ	ಬಿ
	~~3~~	~~3~~
–	1	6

10 ಬಿಡಿಗಳು + 3 ಬಿಡಿಗಳು = 13 ಬಿಡಿಗಳು.



	2	13
	ಹ	ಬಿ
	~~3~~	~~3~~
–	1	6
	1	7

ಕಳೆಯಿರಿ

13 ಬಿಡಿಗಳು – 6 ಬಿಡಿಗಳು = 7 ಬಿಡಿಗಳು

ಕಳೆಯಿರಿ

2 ಹತ್ತುಗಳು – 1 ಹತ್ತುಗಳು = 1 ಹತ್ತುಗಳು.

33 – 16 = 17

62 ನ್ನು 36 ರಿಂದ ಕಳೆಯಿರಿ.

62 — 36 = ☐

ಹ	ಬಿ
6	2
— 3	6

2 < 6 ಆಗಿದೆ. ಆದುದರಿಂದ 2 ಬಿಡಿಗಳಿಂದ 6 ಬಿಡಿಗಳನ್ನು ಕಳೆಯಲು ಆಗದು.

ಆದುದರಿಂದ ನಾವು 1 ಹತ್ತನ್ನು 10 ಬಿಡಿಗಳಾಗಿ ಬದಲಾಯಿಸಿಕೊಳ್ಳುತ್ತೇವೆ.

5	12
ಹ	ಬಿ
~~6~~	~~2~~
— 3	6

10 ಬಿಡಿಗಳು + 2 ಬಿಡಿಗಳು = 12 ಬಿಡಿಗಳು.

5	12
ಹ	ಬಿ
~~6~~	~~2~~
— 3	6
2	6

ಕಳೆಯುವಿಕೆ

12 ಬಿಡಿಗಳು – 6 ಬಿಡಿಗಳು = 6 ಬಿಡಿಗಳು.

ಕಳೆಯುವಿಕೆ

5 ಹತ್ತುಗಳು – 3 ಹತ್ತುಗಳು = 2 ಹತ್ತುಗಳು.

62 – 36 = 26

70 ರಿಂದ 25 ನ್ನು ಕಳೆಯಿರಿ.

70 – 25 = ☐

	ಹ	ಬಿ
	7	0
–	2	5

0 < 5 ಆಗಿರುವುದರಿಂದ 0 ಬಿಡಿಗಳಿಂದ 5 ಬಿಡಿಗಳನ್ನು ಕಳೆಯಲು ಆಗದು.

ಆದುದರಿಂದ ಹತ್ತರ ಸ್ಥಾನದಿಂದ 1 ಹತ್ತನ್ನು ತೆಗೆದು ಅದನ್ನು 10 ಬಿಡಿಗಳಾಗಿ ಬದಲಾಯಿಸುತ್ತೇವೆ.

	6	10
	ಹ	ಬಿ
	~~7~~	~~0~~
–	2	5

10 ಬಿಡಿಗಳು + 0 ಬಿಡಿಗಳು = 10 ಬಿಡಿಗಳು.

	6	10
	ಹ	ಬಿ
	~~7~~	~~0~~
–	2	5
	4	5

ಕಳೆಯುವಿಕೆ

10 ಬಿಡಿಗಳು – 5 ಬಿಡಿಗಳು = 5 ಬಿಡಿಗಳು

ಕಳೆಯುವಿಕೆ

6 ಹತ್ತುಗಳು – 2 ಹತ್ತುಗಳು = 4 ಹತ್ತುಗಳು

70 – 25 = 45

ಈ ಕೆಳಗಿನವುಗಳನ್ನು ಕಳೆಯಿರಿ.

	5	14
	ಹ	ಬಿ
	~~6~~	~~4~~
–	3	8
	2	6

	ಹ	ಬಿ
	4	2
–	2	5

	ಹ	ಬಿ
	5	3
–	1	7

	ಹ	ಬಿ
	9	4
–	3	6

	ಹ	ಬಿ
	9	3
–	1	7

	ಹ	ಬಿ
	7	3
–	4	6

	ಹ	ಬಿ
	8	1
–	3	9

	ಹ	ಬಿ
	6	3
–	4	5

	ಹ	ಬಿ
	9	2
–	4	9

	ಹ	ಬಿ
	7	1
–	2	4

	ಹ	ಬಿ
	5	1
–	2	9

	ಹ	ಬಿ
	9	0
–	2	7

	ಹ	ಬಿ
	8	0
–	3	2

	ಹ	ಬಿ
	6	4
–	2	9

	ಹ	ಬಿ
	5	4
–	2	8

	ಹ	ಬಿ
	9	4
–	3	7

ಚಟುವಟಿಕೆ

1 ರಿಂದ 100 ರ ವರೆಗಿನ ಸಂಖ್ಯಾರಟ್ಟುಗಳನ್ನು ತಯಾರಿಸಿ

1	2	3	....	100

ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ.

★ 1ನೇ ಗುಂಪಿನವರು ಯಾವುದಾದರೂ ಎರಡು ಸಂಖ್ಯಾರಟ್ಟುಗಳನ್ನು ತೆಗೆಯಲಿ.

★ 2ನೇ ಗುಂಪಿನವರು ಅವುಗಳಲ್ಲಿ ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆದು ಉತ್ತರವನ್ನು ಕಂಡುಹಿಡಿಯಿರಿ.

ಈ ಚಟುವಟಿಕೆಯನ್ನು ಇನ್ನು ಹಲವು ಸಂಖ್ಯಾರಟ್ಟುಗಳ ಮೂಲಕ ಮುಂದುವರಿಸಿ.

ಗುಂಪುಗಳನ್ನು ಬದಲಾಯಿಸಿಯೂ ಈ ಚಟುವಟಿಕೆಯನ್ನು ಮಾಡಿಸಿ.

ಚಟುವಟಿಕೆ

★ 0 ಯಿಂದ 9 ರವರೆಗಿನ ಸಂಖ್ಯಾರಟ್ಟುಗಳನ್ನು ತಯಾರಿಸಿ

★ ಯಾವುದಾದರೂ ಮೂರು ಸಂಖ್ಯಾ ರಟ್ಟುಗಳನ್ನು ಆರಿಸಿರಿ. ಅವುಗಳನ್ನು ಉಪಯೋಗಿಸಿಕೊಂಡು ನಿಮಗೆಷ್ಟು ಸಾಧ್ಯವೋ ಅಷ್ಟು ಎರಡಂಕೆಯ ಸಂಖ್ಯೆಗಳನ್ನು ರಚಿಸಿರಿ.

★ ಯಾವುದಾದರೂ ಎರಡು ಸಂಖ್ಯೆಗಳನ್ನು ಆರಿಸಲಿ. ಅವುಗಳಲ್ಲಿರುವ ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆಯುವಂತೆ ತಿಳಿಸಿ.

★ ಮಕ್ಕಳಿಂದ ಇಂತಹ ಹಲವು ಲೆಕ್ಕಗಳನ್ನು ಮಾಡಿಸಿ.

(ಉದಾ) 3 , 4 , 7

ನಮ್ಮಿಂದ ರಚಿಸಬಹುದಾದ ಸಂಖ್ಯೆಗಳು 34, 37, 43, 47, 73, 74, 33, 44, 77

ಅವುಗಳಲ್ಲಿ, 34, 37 ; 37, 43 ; 43, 47 ... ಇಂತಹ ಸಂಖ್ಯಾ ಜೋಡಿಗಳನ್ನು ಆರಿಸಿ ಬರೆಯುವಂತೆ ಮಾಡಿ.

ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆಯುವಂತೆ ತಿಳಿಸಿ.

ಇಂತಹ ಎಷ್ಟು ಸಂಖ್ಯಾ ಜೋಡಿಗಳನ್ನು ಬರೆಯಬಹುದು ಎಂದು ಆಲೋಚಿಸಿ.

ವ್ಯವಕಲನದ (ಕಳೆಯುವಿಕೆಯ) ಕತೆಗಳು.

ಕೋಳಿ ಸಾಕಣೆಯ ಕೇಂದ್ರವೊಂದರಲ್ಲಿ 45 ಕೋಳಿಗಳಿದ್ದವು. ಅವುಗಳಲ್ಲಿ 15 ಕೋಳಿಗಳು ಮಾರಾಟವಾದರೆ, ಉಳಿದ ಕೋಳಿಗಳೆಷ್ಟೆಂದು ಕಂಡುಹಿಡಿಯಿರಿ !

ಒಟ್ಟು ಕೋಳಿಗಳ ಸಂಖ್ಯೆ	= 45
ಮಾರಾಟವಾದ ಕೋಳಿಗಳ ಸಂಖ್ಯೆ	= – 15
ಉಳಿದಿರುವ ಕೋಳಿಗಳ ಸಂಖ್ಯೆ	= 30

ಒಬ್ಬ ಅಂಗಡಿಯವನಲ್ಲಿ 50 ಬಲೂನುಗಳಿದ್ದವು. ಅವರು 25 ಬಲೂನುಗಳನ್ನು ಮಾರಾಟ ಮಾಡಿದನು. ಅವನಲ್ಲಿ ಉಳಿಯುವ ಬಲೂನುಗಳೆಷ್ಟು?

ಒಂದು ಬೀದಿಯಲ್ಲಿ ಒಟ್ಟು 64 ಮನೆಗಳಿವೆ. ಬೀದಿಯ ಒಂದು ಸಾಲಿನಲ್ಲಿ 34 ಮನೆಗಳಿವೆ. ಬೀದಿಯ ಮತ್ತೊಂದು ಸಾಲಿನಲ್ಲಿರುವ ಮನೆಗಳೆಷ್ಟೆಂದು ಕಂಡುಹಿಡಿಯಿರಿ ?

ಒಂದು ಬುಟ್ಟಿಯಲ್ಲಿ 65 ಸೇಬು ಹಣ್ಣುಗಳಿವೆ. ಅವುಗಳಲ್ಲಿ 30 ಸೇಬು ಹಣ್ಣುಗಳು ಮಾರಾಟವಾದರೆ ಅದರಲ್ಲಿ ಉಳಿಯುವ ಸೇಬು ಹಣ್ಣುಗಳೆಷ್ಟು?



ಒಂದು ಸರದಲ್ಲಿ ಹಸಿರು ಮತ್ತು ಹಳದಿ ಬಣ್ಣದ 50 ಮಣಿಗಳಿವೆ. ಅವುಗಳಲ್ಲಿ 25 ಹಸಿರು ಬಣ್ಣದ ಮಣಿಗಳಾದರೆ ಆ ಸರದಲ್ಲಿ ಉಳಿದಿರುವ ಹಳದಿ ಬಣ್ಣದ ಮಣಿಗಳೆಷ್ಟು ?

ಒಬ್ಬ ರೈತನ ಬಳಿ 35 ಜಾನುವಾರುಗಳಿವೆ. ಅವುಗಳಲ್ಲಿ 12 ಹಸುಗಳು ಉಳಿದವುಗಳು ಕುರಿಗಳು. ಹಾಗಾದರೆ ಆ ರೈತನಲ್ಲಿರುವ ಆಡುಗಳೆಷ್ಟು?

ಮನಸ್ಸಿನಲ್ಲಿಯೇ ಮಾಡುವ ಲೆಕ್ಕಗಳು.

ನನ್ನ ಬಳಿ 5 ಕಾರಿನ ಗೊಂಬೆಗಳಿವೆ. ಅವುಗಳಲ್ಲಿ 3 ಕೆಂಪು ಬಣ್ಣದ ಕಾರುಗಳು, ಹಾಗಾದರೆ ನನ್ನ ಬಳಿ ಇರುವ ಹಸಿರು ಬಣ್ಣದ ಕಾರಿನ ಗೊಂಬೆಗಳೆಷ್ಟು?

ನನ್ನ ಅಜ್ಜನು ನನಗೆ 10 ಪೆನ್ಸಿಲುಗಳನ್ನು ಕೊಟ್ಟನು. ಅವುಗಳಲ್ಲಿ 2 ಪೆನ್ಸಿಲುಗಳನ್ನು ನನ್ನ ತಂಗಿಗೆ ಕೊಟ್ಟೆನು. ಈಗ ನನ್ನಲ್ಲಿ ಉಳಿದಿರುವ ಪೆನ್ಸಿಲುಗಳೆಷ್ಟು?

ನಾನು 9 ಬಿಸ್ಕೇಟುಗಳನ್ನು ಕೊಂಡು ಕೊಂಡೆನು. ಅವುಗಳಲ್ಲಿ 5 ಬಿಸ್ಕೇಟುಗಳನ್ನು ತಿಂದರೆ ನನ್ನಲ್ಲಿ ಉಳಿಯುವ ಬಿಸ್ಕೇಟುಗಳೆಷ್ಟು?

ಒಂದು ಮಿನಿ ಬಸ್ಸಿನಲ್ಲಿ 18 ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದರು. ಮುಂದಿನ ಬಸ್ ನಿಲ್ದಾಣದಲ್ಲಿ 6 ಪ್ರಯಾಣಿಕರು ಕೆಳಗಿಳಿದರೆ ಬಸ್ಸಿನಲ್ಲಿ ಉಳಿದಿರುವ ಪ್ರಯಾಣಿಕರೆಷ್ಟು ?

ನನ್ನ ತಂದೆಯು ನನಗೆ 15 ಕತೆ ಪುಸ್ತಕಗಳನ್ನು ಕೊಟ್ಟನು. ನಾನು ಅವುಗಳಿಂದ 9 ಪುಸ್ತಕಗಳನ್ನು ನನ್ನ ಗೆಳೆಯನಿಗೆ ಕೊಟ್ಟೆನು. ಆಗ ನನ್ನಲ್ಲಿ ಉಳಿಯುವ ಪುಸ್ತಕಗಳೆಷ್ಟು?

ತೆಂಗಿನಕಾಯಿ ಮಾರುವ ವ್ಯಾಪಾರಿಯ ಬಳಿ 28 ತೆಂಗಿನಕಾಯಿಗಳಿದ್ದವು. ಅವುಗಳಲ್ಲಿ 18 ತೆಂಗಿನಕಾಯಿಗಳು ಮಾರಾಟವಾದರೆ ವ್ಯಾಪಾರಿಯಲ್ಲಿ ಉಳಿದಿರುವ ತೆಂಗಿನಕಾಯಿಗಳೆಷ್ಟು?

ಒಂದು ಮರದಲ್ಲಿ 13 ಹಕ್ಕಿಗಳು ಕುಳಿತಿದ್ದವು. ಅವುಗಳಲ್ಲಿ 8 ಹಕ್ಕಿಗಳು ಹಾರಿಹೋದರೆ ಆ ಮರದಲ್ಲಿ ಉಳಿದಿರುವ ಹಕ್ಕಿಗಳೆಷ್ಟು?

ಶಿಕ್ಷಕರಿಗೆ ಸೂಚನೆ

ಸಂದರ್ಭಕ್ಕೆ ಸಂಬಂಧಿಸಿದ ಹಲವು ವ್ಯವಕಲನದ ಲೆಕ್ಕಗಳನ್ನು ವಿದ್ಯಾರ್ಥಿಗಳು ಮನಸ್ಸಿನಲ್ಲಿ ಮಾಡುವಂತೆ ಶಿಕ್ಷಕರು ಕೊಡಬಹುದು.

4. ತೂಕದ ಅಳತೆ

ಚಿತ್ರಗಳನ್ನು ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸಿ.

ಯಾವುದು ಭಾರವಾಗಿದೆ?

ಯಾವುದು ಹಗುರವಾಗಿದೆ?

ನಾವೀಗ 3 ವಸ್ತುಗಳನ್ನು ಹೋಲಿಸಿ ನೋಡೋಣ.

ಭಾರ

ಹೆಚ್ಚು ಭಾರ

ಅತೀ ಹೆಚ್ಚು ಭಾರ

ಚಟುವಟಿಕೆ

ಕೆಳಗೆ ತೋರಿಸಿದ ವಸ್ತುಗಳನ್ನು ಸಂಗ್ರಹಿಸಿದ ಬಳಿಕ ಅತೀ ಹಗುರವಾದ ವಸ್ತುವಿನಿಂದ ಆರಂಭಿಸಿ ಅತೀ ಹೆಚ್ಚು ಭಾರದ/ತೂಕದ ವಸ್ತುವಿನ ತನಕ ಅವುಗಳನ್ನು ಕ್ರಮಪಡಿಸಿರಿ.

ಗಣಿತ

ಅಭ್ಯಾಸ

ವಸ್ತುಗಳನ್ನು ಅತೀ ಹಗುರದಿಂದ – ಅತೀ ಭಾರಕ್ಕೆ ಕ್ರಮಪಡಿಸಿ ಇಡಿ–(ಮೊದಲನೆಯದನ್ನು ನಿಮಗಾಗಿ ಮಾಡಿ ತೋರಿಸಿದೆ).

1	3	2

ತೂಕಗಳನ್ನು ಕಂಡುಹಿಡಿಯುವ ಬೇರೆ ಬೇರೆ ಯಂತ್ರಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ನೀವು ಎಲ್ಲಿ ನೋಡಿರುವಿರಿ ಎಂಬುದನ್ನು ಜ್ಞಾಪಿಸಿ ತಿಳಿಸಿ.

ಸಾಮಾನ್ಯವಾಗಿ ವಸ್ತುಗಳ ಭಾರವನ್ನು ಅಳೆಯಲು ಅಥವಾ ಹೋಲಿಸಲು ನಾವು ತಕ್ಕಡಿಯನ್ನು (ತ್ರಾಸನ್ನು) ಉಪಯೋಗಿಸುತ್ತೇವೆ.

ಸೇಬು ಟೊಮೇಟೋಕ್ಕಿಂತ ಭಾರವಾಗಿದೆ,
ಟೊಮೇಟೋ ಸೇಬಿಗಿಂತ ಹಗುರವಾಗಿದೆ.

ಕಲ್ಲು ಚಮಚಕ್ಕಿಂತ ಭಾರಬಾಗಿದೆ.
ಚಮಚವು ಕಲ್ಲಿಗಿಂತ ಹಗುರವಾಗಿದೆ.

ತಕ್ಕಡಿಯ ಎರಡೂ ತಟ್ಟೆಗಳು ಒಂದೇ ಸಮನಾದ ಸ್ಥಿತಿಯಲ್ಲಿ ಇದ್ದರೆ, ಅದರ ಎರಡೂ ತಟ್ಟೆಯಲ್ಲಿರುವ ವಸ್ತುಗಳ ತೂಕವು ಒಂದೇ ಸಮನಾಗಿವೆ ಎಂದು ತಿಳಿಯಬಹುದು.

ಗಣಿತ

ನಾವು ತರಕಾರಿಗಳನ್ನು, ಗೋದಿ, ಅಕ್ಕಿ, ಸಕ್ಕರೆ, ಹಣ್ಣು ಹಂಪಲು ಮುಂತಾದವುಗಳನ್ನು ತೂಕಮಾಡಿ ಕೊಂಡುಕೊಳ್ಳುವೆವು.



ಕಡಿಮೆ ತೂಕದ ವಸ್ತುಗಳನ್ನು ಗ್ರಾಂ ಗಳಲ್ಲಿ ಮತ್ತು ತೂಕದ ವಸ್ತುಗಳನ್ನು ಕಿಲೋ ಗ್ರಾಂ ಗಳಲ್ಲಿ ಅಳೆಯುತ್ತೇವೆ.

ಚಟುವಟಿಕೆ

ಕೆಳಗೆ ಕೊಡಲಾದ ಜೋಡಿ ವಸ್ತುಗಳನ್ನು ನಿಮ್ಮ ಎರಡು ಕೈಗಳಲ್ಲಿ ಎತ್ತಿನೋಡಿ ಅವುಗಳ ತೂಕ (ಭಾರ) ವನ್ನು ಹೋಲಿಸಿರಿ.

- ಬಾಳೆ ಹಣ್ಣು ಮತ್ತು ಕಲ್ಲು.
- ಚೆಂಡು ಮತ್ತು ಬೀಗ.
- ಪೆನ್ನು ಮತ್ತು ಪೆನ್ಸಿಲು.
- ಗೋಲಿ ಮತ್ತು ರಬ್ಬರ್.

ನಿಮ್ಮ ಅನುಭವಕ್ಕೆ ಬಂದ ತೂಕವು ಸರಿಯೇ ಎಂದು ತಕ್ಕಡಿಯ ಸಹಾಯದಿಂದ ತೂಗಿ ನೋಡಿ ದೃಢಪಡಿಸಿ ಕೊಳ್ಳಿ.

ನಿಮಗೆ ಗೊತ್ತೇ?

ಜಲಚರ ಪ್ರಾಣಿಗಳಲ್ಲಿ ಅತೀ ಹೆಚ್ಚು ತೂಕದ ಪ್ರಾಣಿಯೆಂದರೆ ಬ್ಲೂ ವೇಲ್. (blue whale)

'ನನ್ನಿಂದ ಸಾಧ್ಯ, ನಾನು ಮಾಡಿದೆ'

('I can I did')

ವಿದ್ಯಾರ್ಥಿಗಳ ಚಟುವಟಿಕೆ ದಾಖಲೆ

ವಿಷಯ :

ಕ್ರ.ಸಂ	ತಾರೀಖು	ಪಾಠದ ಸಂಖ್ಯೆ	ಪಾಠದ ಹೆಸರು	ಚಟುವಟಿಕೆಗಳು	ಅಭಿಪ್ರಾಯಗಳು